# www.karunaduexams.com

ಪ್ರಚಲಿತ ವಿದ್ಯಮಾನ ಮತ್ತು ಸಾಮಾನ್ಯ ಜ್ಞಾನ ಕ್ವಿಜ್-ಏಪ್ರಿಲ್-ಜುಲೈ,2016

www.karunaduexams.com

**ಹೆಚ್ಚಿನ ಮಾಹಿತಿಗಾಗಿ,**

ನೀಮಗೆ ಯಾವುದೇ ಸಹಾಯದ ಅಗತ್ಯವಿದ್ದರೆ, WhatsApp ಮತ್ತು ಸಂದೇಶವನ್ನು ಮಾಡಿ, ದಯವಿಟ್ಟು ಕರೆ ಮಾಡಬೇಡಿ

Mobile: +91- 98805 33259 (Content related queries)

Mobile: +91-9844915689 (Technical and Marketing related queries)

Mobile:+91-9972355744(Management related queries)

www.karunaduexams.com

1. "ಮೌಸ್ ಲೆಮುರ್ (Mouse Lemur)" ಎಂಬ ಪ್ರಾಣಿ ಪ್ರಭೇದಗಳು ಈ ಯಾವ ಪ್ರದೇಶದಲ್ಲಿ ಮಾತ್ರ ಕಂಡುಬರುತ್ತದೆ?

   ಅ) ಶ್ರೀಲಂಕಾ

   ಆ) ಅಂಡಮಾನ್ ಮತ್ತು ನಿಕೋಬಾರ್

   ಇ) ಮಡಗಾಸ್ಕರ್ ದ್ವೀಪ ಪ್ರದೇಶ

   ಈ) ದಿಬುಗಾರ್ಸಿಯಾ

   **ಮಡಗಾಸ್ಕರ್ ದ್ವೀಪ ಪ್ರದೇಶ**

   ಮೌಸ್ ಲೆಮುರ್ ಪ್ರಾಣಿ ಪ್ರಭೇದಗಳು ಮಡಗಾಸ್ಕರ್ ದ್ವೀಪ ಪ್ರದೇಶದಲ್ಲಿ ಮಾತ್ರ ಕಂಡುಬರುತ್ತವೆ. ನಿಶಾಚಾರಿಗಳಾದ ಲೆಮುರ್ ಗಳು ಮಾಂಸ ಮತ್ತು ಸಸ್ಯಹಾರಿಗಳು. ಮೌಸ್ ಲೆಮುರ್ ಗಳು ಸಸ್ತನಿ ವರ್ಗಕ್ಕೆ ಸೇರಿದ ಪ್ರಾಣಿಗಳಲ್ಲಿ ಅತ್ಯಂತ ಚಿಕ್ಕಗಾತ್ರದ (2 ಗ್ರಾಂ) ಮೆದುಳನ್ನು ಹೊಂದಿರುವ ಪ್ರಾಣಿಗಳು.

2. ಇವರಲ್ಲಿ ಯಾರು ಪ್ರಸ್ತುತ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (IRDA) ನ ಮುಖ್ಯಸ್ಥರು ಆಗಿದ್ದಾರೆ?

   ಅ) ಟಿ. ಎಸ್. ವಿಜಯನ್

   ಆ) ಆರ್. ಶ್ರೀನಿವಾಸನ್

   ಇ) ಚಂದ್ರಶೇಖರ್ ಮುನ್ಷಿ

   ಈ) ಭಾರತಿ ಚಂದ್ರ

   **ಟಿ. ಎಸ್. ವಿಜಯನ್**

   ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ ಈಗಿನ ಮುಖ್ಯಸ್ಥರು ಟಿ.ಎಸ್. ವಿಜಯನ್. ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವನ್ನು 19 ನೇ ಏಪ್ರಿಲ್ 2000 ರಂದು ಸ್ಥಾಪಿಸಲಾಗಿದೆ. ದೇಶದಲ್ಲಿ ವಿಮಾ ಕ್ಷೇತ್ರವನ್ನು ಸಮಗ್ರ ರೀತಿಯಲ್ಲಿ ಅಭಿವೃದ್ಧಿಪಡಿಸುವ ಸಲುವಾಗಿ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (IRDA) ವನ್ನು

ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯಿದೆ 1999 ರ ಪ್ರಕಾರ ಸ್ಥಾಪಿಸಲಾಗಿದೆ. IRDA ಕಾಯಿದೆ ಅನ್ವಯ ಪ್ರಾಧಿಕಾರವು ಓಬ್ಬ ಅಧ್ಯಕ್ಷ, ಐದು ಪೂರ್ಣ ಅವಧಿಯ ಸದಸ್ಯರು ಹಾಗೂ ನಾಲ್ಕು ಅರೆ ಕಾಲಿಕ ಸದಸ್ಯರನ್ನು ಓಳಗೊಂಡಿದೆ. ಅಧ್ಯಕ್ಷರು ಮತ್ತು ಸದಸ್ಯರ ಅವಧಿ ಮೂರು ವರ್ಷಗಳು.

3. ಯಾವ ರಾಷ್ಟ್ರ 2015 ರ ಜಾಗತಿಕ ಮಾನವ ಅಭಿವೃದ್ಧಿ ಸೂಚ್ಯಂಕ ಪ್ರಕಾರ ದಕ್ಷಿಣಾ ಏಷ್ಯಾ ಪ್ರದೇಶದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಮೊದಲ ಸ್ಥಾನದಲ್ಲಿದೆ?

   ಅ) ಭಾರತ

   **ಆ) ಶ್ರೀಲಂಕಾ**

   ಇ) ಭೂತಾನ್

   ಈ) ನೇಪಾಳ

   **ಶ್ರೀಲಂಕಾ**

4. ಇತ್ತೀಚೆಗೆ ನಿಧನರಾದ ವಾಸ್ತುಶಿಲ್ಪಿ 'ಡೇಮ್ ಝಹ ಹದಿದ್" ಯಾವ ದೇಶದವರು?

   ಅ) ಇರಾಕ್

   ಆ) ಇರಾನ್

   ಇ) ಬ್ರೆಜಿಲ್

   ಈ) ಬಾಂಗ್ಲದೇಶ

   **ಇರಾಕ್**

   ಡೇಮ್ ಝಹ ಹದಿದ್ ರವರು ಇರಾಕ್ ಮೂಲದ ಬ್ರಿಟಿಷ್ ವಾಸ್ತುಶಿಲ್ಪಿ. ವಾಸ್ತುಶಿಲ್ಪ ಕ್ಷೇತ್ರದಲ್ಲಿ ವಿಶ್ವಪ್ರಸಿದ್ದಿ ಹೊಂದಿದ್ದ ಹದಿದ್ ರವರು ಪ್ರಿಟ್ಜ್ಕರ್ ಆರ್ಕಿಟೆಕ್ಚರ್ ಪ್ರಶಸ್ತಿಯನ್ನು ಪಡೆದ ಮೊದಲ ಮಹಿಳಾ ಹಾಗೂ ಮೊದಲ ಮುಸ್ಲಿಂ ವಾಸ್ತುಶಿಲ್ಪಿ. 2010 ಮತ್ತು 2011 ನೇ ಸಾಲಿನ ಸ್ಟರ್ಲಿಂಗ್ ಪ್ರಶಸ್ತಿಗೂ ಭಾಜನರಾಗಿದ್ದರು. 2015 ರಲ್ಲಿ ರಿಬಾ ಗೋಲ್ಡ್ ಮೆಡಲ್ (RIBA Gold Medal) ಅನ್ನು ಪಡೆದ ಮೊದಲ ಮಹಿಳೆ ಎಂಬ ಖ್ಯಾತಿಗೂ ಪಾತ್ರರಾಗಿದ್ದರು.

5. ಈ ಕೆಳಗಿನ ಯಾವುದು ಸಿಕ್ಕಿಂ ರಾಜ್ಯದ ಅಧಿಕೃತ ಭಾಷೆ?

   ಅ) ನೇಪಾಳಿ

   ಆ) ಸಿಕ್ಕಿಮೀಸ್

   ಇ) ಇಂಗ್ಲೀಷ್

   ಈ) ಮೇಲಿನ ಎಲ್ಲವೂ

   **ಮೇಲಿನ ಎಲ್ಲವೂ**

www.karunaduexams.com

ಸಿಕ್ಕಿಂನಲ್ಲಿ ಒಟ್ಟು 11 ಭಾಷೆಗಳನ್ನು ಅಧಿಕೃತ ಭಾಷೆಗಳನ್ನಾಗಿ ಅಳವಡಿಸಿಕೊಳ್ಳಲಾಗಿದೆ ಅವುಗಳೆಂದರೆ ನೇಪಾಳಿ, ಸಿಕ್ಕಿಮೀಸ್, ಇಂಗ್ಲೀಷ್, ಹಿಂದಿ, ಲೆಪ್ಚ, ತಮಂಗ್, ಲಿಂಬು, ನೆವಾರಿ, ರಾಯ್, ಗುರುಂಗ್, ಮಗರ್ ಮತ್ತು ಸನ್ವರ್.

6. ಇತ್ತೀಚೆಗೆ ನಾಲ್ಕನೇ ವಿಶ್ವ ಪರಮಾಣು ಭದ್ರತಾ ಶೃಂಗಸಭೆ (World Nuclear Security Summit) ಎಲ್ಲಿ ನಡೆಯಿತು?

ಅ) ವಾಷಿಂಗ್ ಟನ್, ಯುಎಸ್ಎ

ಆ) ಜಿನೇವಾ, ಸ್ವಿಟ್ಜರ್ಲ್ಯಾಂಡ್

ಇ) ಬಿಜೀಂಗ್, ಚೀನಾ

ಈ) ನವದೆಹಲಿ, ಭಾರತ

**ವಾಷಿಂಗ್ ಟನ್, ಯುಎಸ್ಎ**

ನಾಲ್ಕನೇ ವಿಶ್ವ ಪರಮಾಣು ಭದ್ರತಾ ಶೃಂಗಸಭೆಯು ಆಮೇರಿಕಾದ ರಾಜಧಾನಿ ವಾಷಿಂಗ್ ಟನ್ ನಲ್ಲಿ ಮಾರ್ಚ್ 31-ಏಪ್ರಿಲ್ 1 ರವರೆಗೆ ನಡೆಯಿತು. 2010 ರಿಂದ ಎರಡು ವರ್ಷಕ್ಕೊಮ್ಮೆ ಈ ಶೃಂಗಸಭೆಯನ್ನು ಆಯೋಜಿಸಲಾಗುತ್ತಿದೆ. ಮೊದಲ ಶೃಂಗಸಂಭೆಯು ವಾಷಿಂಗ್ ಟನ್, ಯುಎಸ್ಎಯಲ್ಲಿ ನಡೆದಿತ್ತು. ಈ ವರ್ಷ ನಡೆದ ಶೃಂಗಸಭೆಯಲ್ಲಿ ಭಾರತ ಸೇರಿದಂತೆ ವಿಶ್ವದ 52 ರಾಷ್ಟ್ರಗಳು ಭಾಗವಹಿಸಿದ್ದವು.

7. ಈ ಕೆಳಗಿನ ಯಾವ ರಾಜ್ಯ ದೇಶದ ಮೊದಲ ಸಂಪೂರ್ಣ ಸಾವಯವ ಕೃಷಿ ರಾಜ್ಯವೆಂದು ಘೋಷಿಸಲಾಗಿದೆ?

ಅ) ಗುಜರಾತ್

ಆ) ಕೇರಳ

ಇ) ಸಿಕ್ಕಿಂ

ಈ) ಮಧ್ಯ ಪ್ರದೇಶ

**ಸಿಕ್ಕಿಂ**

ಈಶಾನ್ಯ ರಾಜ್ಯ ಸಿಕ್ಕಿಂ ದೇಶದ ಮೊದಲ ಸಂಪೂರ್ಣ ಸಾವಯವ ಕೃಷಿ ರಾಜ್ಯವೆಂದು ಹೆಗ್ಗಳಿಗೆ ಪಾತ್ರವಾಗಿದೆ. ಸುಮಾರು ಆರು ಲಕ್ಷ ಜನಸಂಖ್ಯೆಯನ್ನು ಹೊಂದಿರುವ ಈ ಪುಟ್ಟ ರಾಜ್ಯವನ್ನು ಪ್ರಧಾನಿ ಮೋದಿ ರವರು ಸಿಕ್ಕಿಂ ಭೇಟಿಯ ವೇಳೆ ಸಾವಯವ ಕೃಷಿ ರಾಜ್ಯವೆಂದು ಘೋಷಿಸಿದರು.

8. ಇತ್ತೀಚಿನ ವರದಿಯೊಂದರ ಪ್ರಕಾರ ರಕ್ಷಣಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವ್ಯಹಿಸುವ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) ಮೊದಲ ಸ್ಥಾನ

ಆ) ಎರಡನೇ ಸ್ಥಾನ

ಇ) ತೃತೀಯ ಸ್ಥಾನ

www.karunaduexams.com

ಈ) ನಾಲ್ಕನೇ ಸ್ಥಾನ

**ನಾಲ್ಕನೇ ಸ್ಥಾನ**

ರಕ್ಷಣಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವ್ಯಹಿಸುವ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ ನಾಲ್ಕನೇ ಸ್ಥಾನದಲ್ಲಿದೆ. ಕಳೆದ ವರ್ಷ ಭಾರತ ಆರನೇ ಸ್ಥಾನದಲ್ಲಿದ್ದು, ಎರಡು ಸ್ಥಾನ ಮೇಲೆರಿದೆ. ಅಮೇರಿಕಾ ಸಂಶೋಧನಾ ಸಂಸ್ಥೆ HIS Inc ನಡೆಸಿರುವ ಸಮೀಕ್ಷೆಯಲ್ಲಿ ಈ ಅಂಶ ತಿಳಿದುಬಂದಿದೆ. 2016-17 ನೇ ಸಾಲಿನ ಬಜೆಟ್ ನಲ್ಲಿ ಭಾರತ ರಕ್ಷಣಾ ಕ್ಷೇತ್ರಕ್ಕೆ ಕಳೆದ ಬಾರಿಗಿಂತ ಶೇ 13.7% ಹೆಚ್ಚಿನ ಅನುದಾನವನ್ನು ಹೆಚ್ಚಿಸಲಾಗಿದೆ.

9. ಪ್ಲಾಯ ಸರೋವರ (Playa Lakes)ಗಳು ಯಾವ ಪ್ರದೇಶಗಳಲ್ಲಿ ಕಂಡುಬರುತ್ತವೆ?

ಅ) ಮರುಭೂಮಿ

ಆ) ಹಿಮನದಿ ಪ್ರದೇಶ

ಇ) ಪ್ರವಾಹ ಮೈದಾನ

ಈ) ಸುಣ್ಣಕಲ್ಲು ಪ್ರದೇಶ

**ಮರುಭೂಮಿ**

ಪ್ಲಾಯ ಸರೋವರಗಳು ಮರುಭೂಮಿ ಪ್ರದೇಶದಲ್ಲಿ ಕಂಡುಬರುತ್ತವೆ.

10. ಈ ಕೆಳಗಿನ ಯಾವ ನದಿ ಥಾರ್ ಮರುಭೂಮಿಯಲ್ಲಿ ಹರಿಯುತ್ತದೆ?

ಅ) ಸರಸ್ವತಿ

ಆ) ಲೂನಿ

ಇ) ರಾವಿ

ಈ) ತಪತಿ

**ಲೂನಿ**

ಲೂನಿ ನದಿ ರಾಜಸ್ಥಾನದ ಅರಾವಳಿ ಬೆಟ್ಟಸಾಲುಗಳ ಪುಷ್ಕರ್ ಕಣಿವೆಯಲ್ಲಿ ಉಗಮಗೊಂಡು ಥಾರ್ ಮರುಭೂಮಿಯ ದಕ್ಷಿಣಾ ಭಾಗದಲ್ಲಿ ಹರಿದು ಗುಜರಾತ್ ನ ರನ್ ಆಫ್ ಕಚ್ ನಲ್ಲಿ ಕೊನೆಗೊಳ್ಳುತ್ತದೆ. ಸಾಗರಮತಿ ಎಂತಲೂ ಕರೆಯಲ್ಪಡುವ ಈ ನದಿಯೂ ಸರಿ ಸುಮಾರು 495 ಕಿ.ಮೀ ಉದ್ದದ ನದಿ.

11. ವಿಶ್ವ ಸ್ವಲೀನತೆ ದಿನ (World Autism Day)ವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಏಪ್ರಿಲ್ 1



www.karunaduexams.com

ಆ) ಏಪ್ರಿಲ್ 2

ಇ) ಏಪ್ರಿಲ್ 3

ಈ) ಏಪ್ರಿಲ್ 4

**ಏಪ್ರಿಲ್ 2**

ವಿಶ್ವ ಸ್ವಲೀನತೆ ದಿನವನ್ನು ಪ್ರತಿ ವರ್ಷ ಏಪ್ರಿಲ್ 2 ರಂದು ಆಚರಿಸಲಾಗುತ್ತಿದೆ. ಡಿಸೆಂಬರ್ 18, 2007 ರಲ್ಲಿ ವಿಶ್ವಸಂಸ್ಥೆ ಏಪ್ರಿಲ್ 2 ಅನ್ನು ವಿಶ್ವ ಸ್ವಲೀನತೆ ದಿನವೆಂದು ಆಚರಿಸಲು ಮೊದಲ ಬಾರಿಗೆ ನಿರ್ಣಯಿಸುವ ಮೂಲಕ ಸ್ವಲೀನತೆ ಕಾಯಿಲೆ ಬಗ್ಗೆ ವಿಶ್ವವ್ಯಾಪ್ತಿ ಅರಿವು ಮೂಡಿಸುವ ಧ್ಯೇಯವನ್ನು ಹೊಂದಿದೆ.

12. ದೇಶದ ಮೊದಲ ಉದ್ದೇಶಿತ ಬುಲೆಟ್ ರೈಲು ಈ ಯಾವ ಎರಡು ನಗರಗಳ ನಡುವೆ ಸಂಚಾರ ಮಾಡಲಿದೆ?

ಅ) ಮುಂಬೈ-ಅಹಮದಬಾದ್

ಆ) ಮುಂಬೈ-ಪುಣೆ

ಇ) ದೆಹಲಿ-ಕೊಲ್ಕತ್ತ

ಈ) ಕೊಲ್ಕತ್ತ-ರಾಂಚಿ

**ಮುಂಬೈ-ಅಹಮದಬಾದ್**

ಭಾರತದ ಮೊದಲ ಬುಲೆಟ್ ರೈಲು ಮುಂಬೈ-ಅಹಮದಬಾದ್ ನಡುವೆ ಸಂಚರಿಸಲಿದೆ. ಬುಲೆಟ್ ರೈಲು ಯೋಜನೆಯ ಅಂದಾಜು ಮೊತ್ತ ಸುಮಾರು ರೂ 97,386 ಕೋಟಿ ಆಗಿದ್ದು, ಇದರಲ್ಲಿ ಯೋಜನೆಯ ಶೇ 81% ರಷ್ಟು ಮೊತ್ತವನ್ನು ಜಪಾನ್ ನಿಂದ ಭಾರತ ಸಾಲವಾಗಿ ಪಡೆಯಲಿದೆ. ಮುಂಬೈ-ಅಹಮದಬಾದ್ ನಡುವೆ ಇರುವ 508 ಕಿ.ಮೀ ಅಂತರವನ್ನು ಈ ರೈಲು ಕೇವಲ ಎರಡು ಗಂಟೆ ಅವಧಿಯಲ್ಲಿ ಕ್ರಮಿಸಲಿದೆ. ಸದ್ಯ ಈ ಎರಡು ನಗರಗಳ ನಡುವೆ ಸಂಚರಿಸುತ್ತಿರುವ ಡ್ಯುರಂಟ್ ರೈಲು 7 ಗಂಟೆ ಅವಧಿಯಲ್ಲಿ ಮುಂಬೈ-ಅಹಮದಬಾದ್ ನಡುವೆ ಸಂಚರಿಸುತ್ತಿದೆ.

13. ವಿಶ್ವದಲ್ಲೇ ಮೊದಲೆನಿಸಿರುವ "ಬಿಳಿ ಹುಲಿ ಸಫಾರಿ (White Tiger Safari)" ಅನ್ನು ಯಾವ ರಾಜ್ಯದಲ್ಲಿ ತೆರೆಯಲಾಗಿದೆ?

ಅ) ಕರ್ನಾಟಕ

ಆ) ತಮಿಳುನಾಡು

ಇ) ಮಧ್ಯಪ್ರದೇಶ

ಈ) ಕೇರಳ

**ಮಧ್ಯಪ್ರದೇಶ**

ವಿಶ್ವದ ಮೊದಲ ಬಿಳಿ ಹುಲಿ ಸಫಾರಿ ಯನ್ನು ಮಧ್ಯಪ್ರದೇಶದ ಸಾತ್ನ ಜಿಲ್ಲೆಯ ಮುಕುಂದಪುರದಲ್ಲಿ ಇತ್ತೀಚೆಗೆ ತೆರೆಯಲಾಯಿತು. ಸುಮಾರು ರೂ 50 ಕೋಟಿ ವೆಚ್ಚದಲ್ಲಿ ಹಾಗೂ 25 ಹೆಕ್ಟೇರ್ ವಿಸ್ತೀರ್ಣದಲ್ಲಿ ಈ ಸಫಾರಿಯನ್ನು



www.karunaduexams.com

ಅಭಿವೃದ್ಧಿಪಡಿಸಲಾಗಿದೆ. ಈ ಸಫಾರಿಯಲ್ಲಿ ಮೂರು ಬಿಳಿ ಹುಲಿಗಳನ್ನು ಮತ್ತು ಎರಡು ಬೆಂಗಾಳ ಹುಲಿಗಳು ಸಾರ್ವಜನಿಕರಿಗೆ ಮುಕ್ತವಾಗಿದ್ದು, ನೋಡಿ ಆನಂದಿಸಬಹುದಾಗಿದೆ.

14. ಈ ಕೆಳಗಿನ ಯಾರು ರಾಷ್ಟ್ರೀಯ ಮಾನವ ಹಕ್ಕು ಆಯೋಗದ ಅಧ್ಯಕ್ಷರಾಗಲು ಅರ್ಹರಾಗಿದ್ದಾರೆ?

ಅ) ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಾಧೀಶರು

ಆ) ನಿವೃತ್ತ ಹೈಕೋರ್ಟ್ ಮುಖ್ಯ ನ್ಯಾಯಾಧೀಶರು

ಇ) ನಿವೃತ್ತ ಸುಪ್ರೀಂ ಕೋರ್ಟ್ ಮುಖ್ಯನ್ಯಾಯಾಧೀಶರು

ಈ) ಹಾಲಿ ಸುಪ್ರೀಂಕೋರ್ಟ್ ಮುಖ್ಯನ್ಯಾಯಾಧೀಶರು

**ನಿವೃತ್ತ ಸುಪ್ರೀಂ ಕೋರ್ಟ್ ಮುಖ್ಯನ್ಯಾಯಾಧೀಶರು**

ರಾಷ್ಟ್ರೀಯ ಮಾನವ ಹಕ್ಕು ಆಯೋಗ ಶಾಸನಬದ್ದ ಸಂಸ್ಥೆಯಾಗಿದ್ದು, 12 ನೇ ಅಕ್ಟೋಬರ್ 1993 ರಲ್ಲಿ ಸ್ಥಾಪಿಸಲಾಗಿದೆ. ಆಯೋಗದ ಅಧ್ಯಕ್ಷರು ಖಡ್ಡಾಯವಾಗಿ ನಿವೃತ್ತ ಸುಪ್ರೀಂ ಕೋರ್ಟ್ ಮುಖ್ಯನ್ಯಾಯಾಧೀಶರಾಗಿದ್ದು, ಪ್ರಸ್ತುತ ಎಚ್, ಎಲ್, ದತ್ತು ರವರು ಆಯೋಗದ ಅಧ್ಯಕ್ಷರಾಗಿದ್ದಾರೆ. ಉಳಿದಂತೆ ಓಬ್ಬ ನಿವೃತ್ತ ಅಥವಾ ಹಾಲಿ ಸುಪ್ರೀಂಕೋರ್ಟ್ ನ್ಯಾಯಾಧೀಶರು, ಓಬ್ಬ ನಿವೃತ್ತ ಅಥವಾ ಹಾಲಿ ಹೈಕೋರ್ಟ್ ನ ಮುಖ್ಯನ್ಯಾಯಾಧೀಶರು ಹಾಗೂ ಮಾನವ ಹಕ್ಕು ಕ್ಷೇತ್ರದಲ್ಲಿ ನಿಪುಣತೆಹೊಂದಿರುವ ಇಬ್ಬರನ್ನು ಆಯೋಗದ ಸದಸ್ಯರಾಗಿರುತ್ತಾರೆ.

15. ಸೌದಿ ಅರೇಬಿಯಾದ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ “ದಿ ಕಿಂಗ್ ಅಬ್ದುಲಝೀಜ್ ಸಶ್” ಅನ್ನು ಇತ್ತೀಚೆಗೆ ಯಾರಿಗೆ ನೀಡಲಾಯಿತು?

ಅ) ನರೇಂದ್ರ ಮೋದಿ

ಆ) ಬರಾಕ್ ಓಬಾಮ

ಇ) ಮನಮೋಹನ್ ಸಿಂಗ್

ಈ) ಸೋನಿಯಾ ಗಾಂಧಿ

**ನರೇಂದ್ರ ಮೋದಿ**

ಪ್ರಧಾನ ಮಂತ್ರಿ ನರೇಂದ್ರ ಮೋದಿ ರವರಿಗೆ ಸೌದಿ ಅರೇಬಿಯಾ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ “ದಿ ಕಿಂಗ್ ಅಬ್ದುಲಝೀಜ್ ಸಶ್” ಅನ್ನು ನೀಡಿ ಗೌರವಿಸಲಾಯಿತು. ಆಧುನಿಕ ಸೌದಿ ರಾಜ್ಯದ ಸಂಸ್ಥಾಪಕ ಅಬ್ದುಲಝೀಜ್ ಅಲ್ ಸಾದ್ ಸ್ಮರಣಾರ್ಥ ಸ್ಥಾಪಿಸಿರುವ ಈ ಪ್ರಶಸ್ತಿಯನ್ನು ಸೌದಿ ದೊರೆ ಸಲ್ಮಾನ್ ಬಿನ್ ಅಬ್ದುಲಝೀಜ್ ರವರು ಮೋದಿರವರಿಗೆ ನೀಡಿ ಗೌರವಿಸಿದರು.

16. ಯುನೈಟೆಡ್ ನೇಷನ್ಸ್ ಇಂಡಸ್ಟ್ರೀಯಲ್ ಡೆವಲಪ್ ಮೆಂಟ್ ಆರ್ಗನೈಸಷನ್ (UNIDO) ವರದಿ ಪ್ರಕಾರ ಯಾವ ದೇಶ ವಿಶ್ವದ ಅತಿ ದೊಡ್ಡ ಉತ್ಪಾದನ ರಾಷ್ಟ್ರ ಎನಿಸಿದೆ?

www.karunaduexams.com

ಅ) ಭಾರತ

ಆ) ಚೀನಾ

ಇ) ಕೆನಡಾ

ಈ) ಜಪಾನ್

**ಚೀನಾ**

ಯುನೈಟೆಡ್ ನೇಷನ್ಸ್ ಇಂಡಸ್ಟ್ರೀಯಲ್ ಡೆವಲಪ್ ಮೆಂಟ್ ಆರ್ಗನೈಸಷನ್ (UNIDO) ಇತ್ತೀಚಗೆ ಬಿಡುಗಡೆ ಮಾಡಿದ ವರದಿ ಪ್ರಕಾರ ಚೀನಾ ವಿಶ್ವದ ಅತಿ ದೊಡ್ಡ ಉತ್ಪಾದನ ರಾಷ್ಟ್ರವಾಗಿ ಹೊರಹೊಮ್ಮಿದೆ. ಭಾರತ ಈ ಪಟ್ಟಿಯಲ್ಲಿ 6 ನೇ ಸ್ಥಾನವನ್ನು ಗಿಟ್ಟಿಸಿಕೊಂಡಿದೆ. ಪಟ್ಟಿಯಲ್ಲಿ ಚೀನಾ ನಂತರ ಅಮೇರಿಕಾ, ಜಪಾನ್, ಜರ್ಮನಿ ಮತ್ತು ಕೊರಿಯಾ ಟಾಪ್ ಐದು ಸ್ಥಾನದಲ್ಲಿವೆ.

17. ಭಾರತ ಸಂವಿಧಾನದ ಯಾವ ತಿದ್ದುಪಡಿ ಹೈದ್ರಾಬಾದ್-ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವುದಕ್ಕೆ ಸಂಬಂಧಿಸಿರುವುದಾಗಿದೆ?

ಅ) 119 ನೇ ತಿದ್ದುಪಡಿ

ಆ) 118 ನೇ ತಿದ್ದುಪಡಿ

ಇ) 120 ನೇ ತಿದ್ದುಪಡಿ

ಈ) 121 ನೇ ತಿದ್ದುಪಡಿ

**118 ನೇ ತಿದ್ದುಪಡಿ**

ಹೈದ್ರಾಬಾದ್-ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ ನೀಡುವ ಅನುಚ್ಛೇದ 371 (ಜೆ) ಒಳಗೊಂಡ ಸಂವಿಧಾನದ 118ನೇ ತಿದ್ದುಪಡಿಗೆ ಲೋಕಸಭೆ ಡಿಸೆಂಬರ್ 18, 2012 ರಂದು ಅನುಮೋದನೆ ನೀಡಿತು. ಮರುದಿನ ಅಂದರೆ ಡಿಸೆಂಬರ್ 19, 2012 ರಲ್ಲಿ ರಾಜ್ಯಸಭೆ ಅನುಮೋದನೆ ನೀಡಿತು.

18. ಯಾವ ವರ್ಷದಿಂದ ಭಾರತ ಸರ್ಕಾರ ಪಂಚವಾರ್ಷಿಕ ಕೃಷಿ ಗಣತಿಯನ್ನು ಕೈಗೊಳ್ಳಲಾಗುತ್ತಿದೆ?

ಅ) 1947-48

ಆ) 1960-61

ಇ) 1970-71

ಈ) 1980-81

**1970-71**

1970-71 ರಿಂದ ಭಾರತ ಸರ್ಕಾರ ಐದು ವರ್ಷಕ್ಕೊಮ್ಮೆ ಕೃಷಿ ಗಣತಿಯನ್ನು ಕೈಗೊಳ್ಳಲಾಗುತ್ತಿದೆ. ಕೃಷಿ ತಗುಲುವ ವೆಚ್ಚವನ್ನು ಸಂಪೂರ್ಣವಾಗಿ ಕೇಂದ್ರ ಸರ್ಕಾರ ನೀಡುತ್ತಿದ್ದು, ಗಣತಿಯನ್ನು ನಡೆಸುವ ಹೊಣೆ ರಾಜ್ಯ ಸರ್ಕಾರದಗಿರುತ್ತದೆ.

www.karunaduexams.com

19. 2016 ರ ಮಿಯಾಮಿ ಓಪನ್ ಸಿಂಗಲ್ಸ್ ನಲ್ಲಿ ಪ್ರಶಸ್ತಿ ಗೆದ್ದ ಪುರುಷ ಮತ್ತು ಮಹಿಳಾ ಆಟಗಾರರು ಕ್ರಮವಾಗಿ_____?

ಅ) ನೊವಾಕ್ ಜೊಕೊವಿಕ್ ಮತ್ತು ವಿಕ್ಟೊರಿಕ ಅಝುರೆಕಾ

ಆ) ರಫೆಲ್ ನಡಲ್ ಮತ್ತು ಸ್ವೆಟಲನಾ ಕುಜ್ನೆಸ್ತೊವ

ಇ) ಡೆವಿಡ್ ಫೆರರ್ ಮತ್ತು ವಿಕ್ಟೊರಿಕ ಅಝುರೆಕಾ

ಈ) ರಫೆಲ್ ನಡಲ್ ಮತ್ತು ಮಾರ್ಟಿನ ಹಿಂಗೀಸ್

**ನೊವಾಕ್ ಜೊಕೊವಿಕ್ ಮತ್ತು ವಿಕ್ಟೊರಿಕ ಅಝುರೆಕಾ**

ನೊವಾಕ್ ಜೊಕೊವಿಕ್ ಮಿಯಾಮಿ ಓಪನ್ ಸಿಂಗಲ್ಸ್ ನಲ್ಲಿ ಜಪಾನ್ ಕೀ ನಿಷಿಕೊರಿ ಅವರನ್ನು 6-3, 6-3 ರಲ್ಲಿ ಮಣಿಸುವ ಮೂಲಕ ವಿಜೇತರಾದರು. ಇನ್ನು ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಬೆಲಾರಸ್ ನ ವಿಕ್ಟೋರಿಯಾ ಅಝುರೆಕಾ ರಷ್ಯಾದ ಸ್ವೆಟಲನಾ ಕುಜ್ನೆಸ್ತೊವ ಅವರನ್ನು ಸೋಲಿಸಿ ಪ್ರಶಸ್ತಿಯನ್ನ ಮುಡಿಗೇರಿಸಿಕೊಂಡರು.

20. ದೇಶದ ಮೊದಲ ಆಧಾರ್ ಕಾರ್ಡ್ ಆಧಾರಿತ ಎಟಿಎಮ್ ಅನ್ನು ಈ ಕೆಳಗಿನ ಯಾವ ಬ್ಯಾಂಕ್ ಇತ್ತೀಚೆಗೆ ಚಾಲನೆ ನೀಡಿತು?

ಅ) ಸ್ಟೇಟ್ ಬ್ಯಾಂಕ್ ಆಫ್ ಮೈಸೂರು

ಆ) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

ಇ) ಡಿಸಿಬಿ ಬ್ಯಾಂಕ್

ಈ) ದೇನಾ ಬ್ಯಾಂಕ್

**ಡಿಸಿಬಿ ಬ್ಯಾಂಕ್**

ದೇಶದ ಮೊದಲ ಆಧಾರ್ ಕಾರ್ಡ್ ಆಧಾರಿತ ಎಟಿಎಮ್ ಸೇವೆಯನ್ನು ಡಿಸಿಬಿ ಬ್ಯಾಂಕ್ ಅನಾವರಣಗೊಳಿಸಿತು. ಎಟಿಎಮ್/ಡೆಬಿಟ್ ಕಾರ್ಡ್ ಬಳಕೆ ಹೊರತಾಗಿ ಈ ಎಟಿಎಮ್ ಆಧಾರ್ ನಂಬರ್ ಮತ್ತು ಆಧಾರ್ ಬೆರಳಚ್ಚನ್ನು ಬಳಸಿ ಹಣ ಪಡೆಯಬಹುದಾಗಿದೆ. ಈ ಸೇವೆಗೆ ಯಾವುದೇ ಕಾರ್ಡ್ ಅಥವಾ ಪಿನ್ ಬಳಕೆಯ ಅಗತ್ಯವಿಲ್ಲ.

21. ರೈಲಿನಲ್ಲಿ ಆಸ್ಪತ್ರೆಯನ್ನು ಹೊಂದಿರುವಂತಹ ಜಗತ್ತಿನ ಮೊಟ್ಟಮೊದಲ ರೈಲು ಯಾವುದು?

ಅ) ಜೀವನ ಜ್ಯೋತಿ ಎಕ್ಸ್ ಪ್ರೆಸ್

ಆ) ರಾಜಧಾನಿ ಎಕ್ಸ್ ಪ್ರೆಸ್

ಇ) ಗತಿಮಾನ್ ಎಕ್ಸ್ ಪ್ರೆಸ್

ಈ) ಲೈಫ್ ಲೈನ್ ಎಕ್ಸ್ ಪ್ರೆಸ್

ಲೈಫ್ ಲೈನ್ ಎಕ್ಸ್ ಪ್ರೆಸ್

www.karunaduexams.com

ಲೈಫ್ ಲೈನ್ ಎಕ್ಸ್ ಪ್ರೆಸ್ (ಅಥವಾ ಜೀವನ್ ರೇಖಾ ಎಕ್ಸ್ ಪ್ರೆಸ್) ಎಂಬುದು ಜಗತ್ತಿನ ಮೊಟ್ಟಮೊದಲ ಆಸ್ಪತ್ರೆ ರೈಲು, ಇದು ಸತತ 25 ವರ್ಷಗಳ ಕಾಲ ಬಡವರಿಗೆ ವೈದ್ಯಕೀಯ ಸೇವೆ ಒದಗಿಸುವಲ್ಲಿ ನಿರಂತರ ಶ್ರಮಿಸಿದೆ. ಸರಿ ಸುಮಾರು 173 ಯೋಜನೆಗಳಲ್ಲಿ 18 ರಾಜ್ಯಗಳ 2 ಲಕ್ಷಕ್ಕೂ ಹೆಚ್ಚು ಬಡ ಜನರಿಗೆ ಸಾಮಾನ್ಯ ವೈದ್ಯಕೀಯ ಸೇವೆ ಸೇರಿದಂತೆ ಅಂಧತ್ವ ನಿವಾರಣೆ, ಅಂಗ ವೈಕಲ್ಯ, ಶ್ರವಣ ದೋಷ ಮುಂತಾದ ಕಾಯಿಲೆಗಳಿಗೆ ಉಚಿತ ಸೇವೆ ನೀಡಿದೆ. ಇತ್ತೀಚೆಗೆ ಈ ರೈಲು 25 ವರ್ಷಗಳ ಸೇವೆಯನ್ನು ಯಶಸ್ವಿಯಾಗಿ ಸಂಭ್ರಮಿಸಿಕೊಂಡಿತು.

22. ದಕ್ಷಿಣ ಸೂಡಾನ್ ನ ಯುದ್ಧಿ ಪೀಡಿತ ಪ್ರದೇಶಗಳಿಂದ ಭಾರತೀಯರನ್ನು ಸುರಕ್ಷಿತವಾಗಿ ವಾಪಸ್ಸು ಕರೆಸಿಕೊಳ್ಳಲು ಕಾರ್ಯಾಚರಣೆಯನ್ನು  ನಡೆಸಲಾಯಿತು, ಈ ಕಾರ್ಯಾಚರಣೆಯ ಹೆಸರೇನು?

ಅ) ಆಪರೇಷನ್ ರಾಹತ್

ಆ) ಆಪರೇಷನ್ ಸುರಕ್ಷಿತ್

ಇ) ಆಪರೇಷನ್ ಸಂಕಟ್ ಮೋಚನ್

ಈ) ಆಪರೇಷನ್ ವಿಮೋಚನ್

**ಆಪರೇಷನ್ ಸಂಕಟ್ ಮೋಚನ್**

ಆಫ್ರಿಕ ದೇಶದ ದಕ್ಷಿಣ ಸೂಡಾನ್ ನ ಯುದ್ಧಿ ಪೀಡಿತ ಪ್ರದೇಶಗಳಿಂದ ಭಾರತೀಯರನ್ನು ಸುರಕ್ಷಿತವಾಗಿ ವಾಪಸ್ಸು ಕರೆಸಿಕೊಳ್ಳಲು ಭಾರತ ಸರ್ಕಾರವು ಆಪರೇಷನ್ ಸಂಕಟ್ ಮೋಚನ್ ಎಂಬ ಕಾರ್ಯಾಚರಣೆ ಕೈಗೊಂಡಿತ್ತು. ಸುಮಾರು 600 ಭಾರತೀಯರನ್ನು ಈ ಕಾರ್ಯಾಚರಣೆಯ ಮೂಲಕ ಭಾರತಕ್ಕೆ ಸುರಕ್ಷಿತವಾಗಿ ಕರತರಲಾಯಿತು.

23. ಭಾರತದಲ್ಲಿ ದ್ವಿದಳ ಧಾನ್ಯಗಳ ಕೊರತೆಯನ್ನು ನೀಗಿಸುವ ಸಲುವಾಗಿ ಅಧ್ಯಯನ ಮಾಡಲು ಈ ಕೆಳಕಂಡ ಯಾವ ಸಮಿತಿಯನ್ನು ರಚಿಸಲಾಗಿದೆ?

ಅ) ಅರವಿಂದ ಸುಬ್ರಮಣ್ಯನ್ ಸಮಿತಿ

ಆ) ರಂಗರಾಜನ್ ಸಮಿತಿ

ಇ) ಸಂಜಯ್ ಪಗಾರಿಯಾ ಸಮಿತಿ

ಈ) ಎನ್ ಕೆ ಸಿಂಗ್ ಸಮಿತಿ

**ಅರವಿಂದ ಸುಬ್ರಮಣ್ಯನ್ ಸಮಿತಿ**

www.karunaduexams.com

ದೇಶದಲ್ಲಿ ಎದುರಾಗಿರುವ ಬೇಳೆಕಾಳುಗಳ ಕೊರತೆಯನ್ನು ನಿಯಂತ್ರಿಸುವ ಸಲುವಾಗಿ ಕೇಂದ್ರ ಸರ್ಕಾರ ಉನ್ನತಮಟ್ಟದ ಸಮಿತಿಯನ್ನು ರಚಿಸಿದೆ. ವಿತ್ತ ಸಚಿವ ಅರುಣ್ ಜೆಟ್ಲಿ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ. ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರರಾದ ಅರವಿಂದ್ ಸುಬ್ರಮಣ್ಯನ್ ರವರು ಈ ಉನ್ನತ ಮಟ್ಟದ ಸಮಿತಿಯ ಅಧ್ಯಕ್ಷರಾಗಿದ್ದಾರೆ.

24. ನೇಪಾಳದ ಪ್ರಥಮ ಮಹಿಳಾ ಮುಖ್ಯನ್ಯಾಯಮೂರ್ತಿಯಾಗಿ ಆಯ್ಕೆಯಾದ ವ್ಯಕ್ತಿ ಯಾರು?

ಅ) ಕಲ್ಯಾಣಿ ಶ್ರೇಷ್ಠ

ಆ) ಮೃದುಲ ಉಪಾಧ್ಯಾಯ

ಇ) ಸುಶೀಲ ಕರ್ಕಿ

ಈ) ನಿರ್ಜಲ ನಾಗೇಂದ್ರ

ಸುಶೀಲ ಕರ್ಕಿ

ಸುಶೀಲ ಕರ್ಕಿರವರು ನೇಪಾಳದ ಪ್ರಥಮ ಮಹಿಳಾ ಮುಖ್ಯ ನ್ಯಾಯಮೂರ್ತಿ ಆಗಿ ಅಧಿಕಾರ ವಹಿಸಿಕೊಂಡರು. ನೇಪಾಳದ ರಾಷ್ಟ್ರಪತಿ ನಿಲಯವಾದ ಶೀತಲ್ ನಿವಾಸ್ ನಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಸುಶೀಲ ರವರಿಗೆ ರಾಷ್ಟ್ರಪತಿ ಬಿದ್ಯ ದೇವಿ ಭಂಡಾರಿ ರವರು ಪ್ರಮಾಣ ವಚನ ಬೋಧಿಸಿದರು. ಸುಶೀಲ ರವರು ಜೂನ್ 6, 2017 ರ ತನಕ ಮುಖ್ಯ ನ್ಯಾಯಮೂರ್ತಿ ಆಗಿ ಕಾರ್ಯನಿರ್ವಹಿಸಲಿದ್ದಾರೆ.

25. ಗಂಗಾಜಲವನ್ನು ಮನೆಗಳಿಗೆ ತಲುಪಿಸುವ ಸೇವೆಯನ್ನು ಭಾರತದ ಈ ಕೆಳಕಂಡ ಯಾವ ನಗರದಿಂದ ಆರಂಭಿಸಲಾಗಿದೆ?

ಅ) ವಾರಣಾಸಿ

ಆ) ಅಲಹಾಬಾದ್

ಇ) ಪಾಟ್ನಾ

ಈ) ಡೆಹ್ರಾಡೂನ್

ಪಾಟ್ನಾ

www.karunaduexams.com

ಗಂಗಾಜಲವನ್ನು ಮನೆಗಳಿಗೆ ತಲುಪಿಸುವ ಸೇವೆಯನ್ನು ಬಿಹಾರ ರಾಜ್ಯದ ಪಾಟ್ನ ಅಂಚೆ ಕಚೇರಿಯಿಂದ ಆರಂಭಿಸಲಾಯಿತು. ಪವಿತ್ರ ಗಂಗಾ ನದಿಯ ನೀರನ್ನು ಜನರಿಗೆ ಅಂಚೆ ಇಲಾಖೆ ಮೂಲಕ ವಿತರಿಸುವುದು ಈ ಯೋಜನೆಯ ಮುಖ್ಯ ಉದ್ದೇಶ. ಈ ಯೋಜನೆಯಲ್ಲಿ ಗಂಗೋತ್ರಿ ಮತ್ತು ರಿಷಿಕೇಷದಿಂದ ಸಂಗ್ರಹಿಸಿದ ಗಂಗಾಜಲವನ್ನು ಸಾರ್ವಜನಿಕರ ಮನೆ ಬಾಗಿಲಿಗೆ ಭಾರತೀಯ ಅಂಚೆ ಇಲಾಖೆ ತಲುಪಿಸಲಿದೆ.

26. "ಸೆಂಟರ್ ಆಫ್ ಎಕ್ಸಲೆನ್ಸ್ ಆನ್ ಇಂಟರ್ನೆಟ್ ಆಫ್ ತಿಂಗ್ಸ್ (Centre of Excellence on Internet of Things CoE-IoT) ನ್ನು ಯಾವ ನಗರದಲ್ಲಿ ಪ್ರಾರಂಭಿಸಲಾಯಿತು?

ಅ) ಚೆನ್ನೈ

ಆ) ಗುರುಗ್ರಾಮ

ಇ) ಹೈದರಾಬಾದ್

ಈ) ಬೆಂಗಳೂರು

ಬೆಂಗಳೂರು

ದೇಶದ ಮೊದಲ ಸೆಂಟರ್ ಆಫ್ ಎಕ್ಸಲೆನ್ಸ್ ಆನ್ ಇಂಟರ್ನೆಟ್ ಆಫ್ ತಿಂಗ್ಸ್ ಯನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಲಾಯಿತು. ಪ್ರಧಾನ ಮಂತ್ರಿ ನರೇಂದ್ರ ಮೋದಿ ರವರು ಇದಕ್ಕೆ ಚಾಲನೆ ನೀಡಿದರು. ಸೆಂಟರ್ ಆಫ್ ಎಕ್ಸಲೆನ್ಸ್ ಆನ್ ಇಂಟರ್ನೆಟ್ ಆಫ್ ತಿಂಗ್ಸ್ ಅನ್ನು ನಾಸ್ಕಂ (NASSCOM) ಮತ್ತು ಡಯಟಿ (DEITY) ಸಹಯೋಗದಲ್ಲಿ ಆರಂಭಿಸಲಾಗಿದೆ. ನವೋದ್ಯಮಿಗಳಿಗೆ ತಾಂತ್ರಿಕ ಸಲಹೆಯನ್ನು ನೀಡುವ ಉದ್ದೇಶದೊಂದಿಗೆ ಇದನ್ನು ಆರಂಭಿಸಲಾಗಿದೆ.

27. ಇತ್ತೀಚೆಗೆ "ತೆರೆಸಾ ಮೇ" ಯಾವ ದೇಶದ ನೂತನ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದರು?

ಅ) ಬ್ರಿಟನ್

ಆ) ನ್ಯೂಜಿಲ್ಯಾಂಡ್

ಇ) ಆಸ್ಟ್ರೇಲಿಯಾ

ಈ) ಇಟಲಿ

ಬ್ರಿಟನ್

ಬ್ರಿಟನ್ ನ ನೂತನ ಪ್ರಧಾನ ಮಂತ್ರಿಯಾಗಿ ಕನ್ಸರ್ವೇಟಿವ್ ಪಕ್ಷದ ನಾಯಕಿ ತೆರೆಸಾ ಮೇ ರವರು ಅಧಿಕಾರ ಸ್ವೀಕರಿಸಿದ್ದಾರೆ. ಆ ಮೂಲಕ ಬ್ರಿಟನ್ ನ ಪ್ರಧಾನ ಮಂತ್ರಿ ಹುದ್ದೆ ಅಲಂಕರಿಸಿದ ಎರಡನೇ ಮಹಿಳೆ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಬ್ರಿಟನ್ ನ ಪ್ರಧಾನಿಯಾಗಿದ್ದ ಡೇವಿಡ್ ಕ್ಯಾಮರೂನ್ ಬ್ರೆಕ್ಸಿಟ್ ಗಾಗಿ ತಮ್ಮ ಹುದ್ದೆಗೆ ರಾಜಿನಾಮೆ ನೀಡಿದ್ದ ಹಿನ್ನಲೆಯಲ್ಲಿ ತೆರವಾಗಿದ್ದ ಪ್ರಧಾನಿ ಹುದ್ದೆಯನ್ನು ತೆರೆಸಾ ವಹಿಸಿಕೊಂಡಿದ್ದಾರೆ. ಡೇವಿಡ್ ಕ್ಯಾಮರೂನ್ ರವರು

www.karunaduexams.com

ಆರು ವರ್ಷಗಳ ಕಾಲ ಬ್ರಿಟನ್ ಪ್ರಧಾನಿ ಆಗಿದ್ದರು. ಮಾರ್ಗರೇಟ್ ಥ್ಯಾಚರ್ ಬ್ರಿಟನ್ ನ ಮೊದಲ ಮಹಿಳಾ ಪ್ರಧಾನಿ ಆಗಿದ್ದರು. ಥ್ಯಾಚರ್ ರವರು 1979-90ರ ತನಕ ಅಧಿಕಾರದಲ್ಲಿದ್ದರು

28. ಅಂತರರಾಷ್ಟ್ರೀಯ ಸಾಗರಯಾನ ಸಂಸ್ಥೆಯ ಪ್ರಶಸ್ತಿ ಪಡೆದ ಮೊದಲ ಮಹಿಳೆ ಯಾರು?

ಅ) ರಮ್ಯಾ ಕುಲಕರ್ಣಿ

ಆ) ಜಾಸ್ಮಿನ್ ಹಡ್ಸನ್

ಇ) ರಾಧಿಕ ಮೆನನ್

ಈ) ಪ್ರಮೀಳಾ ಜೆಸ್ಸಿ

ರಾಧಿಕ ಮೆನನ್

ಕ್ಯಾಪ್ಟನ್ ರಾಧಿಕಾ ಮೆನನ್ ರವರು ಸಾಗರದಲ್ಲಿ ತೋರಿದ ಅನ್ಯನ ಸಾಧನೆಗಾಗಿ ಅಂತಾರಾಷ್ಟ್ರೀಯ ಸಾಗರಯಾನ ಸಂಸ್ಥೆ ನೀಡುವ ಅಂತಾರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈ ಪ್ರಶಸ್ತಿಯನ್ನು ಪಡೆಯುವ ಮೂಲಕ ರಾಧಿಕಾ ಮೆನನ್ ರವರು ಈ ಪ್ರಶಸ್ತಿ ಪಡೆದ ವಿಶ್ವದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

29. ತಾಯಿಯಿಂದ ಮಗುವಿಗೆ ಏಡ್ಸ್ ರೋಗ ಬಾರದಂತೆ ನಿಯಂತ್ರಿಸಿದ ಏಷ್ಯಾದ ಮೊದಲ ರಾಷ್ಟ್ರ ಯಾವುದು?

ಅ) ಚೀನಾ

ಆ) ಭಾರತ

ಇ) ಥಾಯ್ಲೆಂಡ್

ಈ) ಜಪಾನ್

ಥಾಯ್ಲೆಂಡ್

ತಾಯಿಯಿಂದ ಮಗುವಿಗೆ ಎಚ್ಐವಿ ಸೋಂಕು ಹರಡುವುದನ್ನು ತಡೆಗಟ್ಟುವ ಏಷ್ಯಾದ ಮೊದಲ ರಾಷ್ಟ್ರವಾಗಿ ಥಾಯ್ಲೆಂಡ್ ಹೊರಹೊಮ್ಮಿದೆ. ಥಾಯ್ಲೆಂಡ್ ನ ಈ ಸಾಧನೆಯನ್ನು ವಿಶ್ವ ಆರೋಗ್ಯ ಸಂಸ್ಥೆ ಖಚಿತಪಡಿಸಿದೆ. ಈ ಸಂಬಂಧ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಥಾಯ್ಲೆಂಡ್ ನ ಆರೋಗ್ಯ ಸಚಿಚರಿಗೆ ಪ್ರಮಾಣಪತ್ರ ನೀಡಿ ಗೌರವಿಸಲಾಯಿತು.

30. ಇತ್ತೀಚೆಗೆ ಬಿಡುಗಡೆಗೊಳಿಸಲಾದ "ಉತ್ತಮ ದೇಶ ಸೂಚ್ಯಂಕ" ದಲ್ಲಿ ಭಾರತ ಎಷ್ಟನೇ ಸ್ಥಾನ ಪಡೆದುಕೊಂಡಿದೆ?

ಅ) 56

ಆ) 70

www.karunaduexams.com

ಇ) 87

ಈ) 90

70

ದೇಶದ ಜನರ ಬೇಡಿಕೆಗಳನ್ನು ಈಡೇರಿಸುವ ಮಾನದಂಡಗಳನ್ನು ಇಟ್ಟುಕೊಂಡು ನಡೆಸಲಾದ ಉತ್ತಮ ದೇಶ ಸಮೀಕ್ಷೆಯ ಸೂಚ್ಯಂಕದಲ್ಲಿ ಸ್ವೀಡನ್ ಜಗತ್ತಿನಲ್ಲಿ ಅತ್ಯುತ್ತಮ ದೇಶವಾಗಿ ಹೊರಹೊಮ್ಮಿದೆ. ಈ ಪಟ್ಟಿಯಲ್ಲಿ ಭಾರತ 70ನೇ ಸ್ಥಾನವನ್ನು ಪಡೆದುಕೊಂಡಿದೆ. ಈ ಸಮೀಕ್ಷೆಯನ್ನು ವಿಶ್ವಸಂಸ್ಥೆ ಮತ್ತು ವಿಶ್ವಬ್ಯಾಂಕ್ ನೀಡಿದ ವಿವಿಧ ಮಾಹಿತಿ ಆಧಾರದ ಮೇಲೆ ಕೈಗೊಳ್ಳಲಾಗಿದೆ. ಸಮೀಕ್ಷೆಗೆ ವಿಶ್ವದ 163 ರಾಷ್ಟ್ರಗಳನ್ನು ಒಳಪಡಿಸಲಾಗಿ, ವಿಜ್ಞಾನ, ಸಂಸ್ಕೃತಿ, ಶಾಂತಿ ಮತ್ತು ಭದ್ರತೆ, ಹವಾಮಾನ ಬದಲಾವಣೆ, ಆರೋಗ್ಯ ಮತ್ತು ಸಮಾನತೆ ಆಧಾರದಲ್ಲಿ ದೇಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿತ್ತು.

www.karunaduexams.com